# ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಸ್ವಾತಂತ್ರ್ಯದ ಅಮೃತ ಮಹೋತ್ಸವ

Ref: No. KU/Aca(S&T)/SSL-441/ U.G. Admn.rules/PUC-Suppl-2./2023-24/950 ದಿನಾಂಕ: 14 SEP 2023

## ಸುತ್ತೋಲೆ–1

**ವಿಷಯ:** ಅಗಸ್ಟ್ / ಸೆಪ್ಟೆಂಬರ್, 2023ರ ತಿಂಗಳಿನಲ್ಲಿ ಜರುಗಿದ **ಪಿಯುಸಿ ದ್ವಿತೀಯ ಪೂರಕ–2 (PUC Supplementary Exam-2)** ಪರೀಕ್ಷೆಯಲ್ಲಿ ಉತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ಪ್ರಥಮ ವರ್ಷದ ಸ್ನಾತಕ ಪದವಿ ಕೋರ್ಸುಗಳಿಗೆ (1ನೇ ಸೆಮಿಸ್ಟರಗೆ) ಪ್ರವೇಶ ನೀಡುವ ಕುರಿತು.

**ಉಲ್ಲೇಖ:** 1) 2023–24ನೇ ಸಾಲಿನ ಸ್ನಾತಕ ಕೋರ್ಸುಗಳ ಪ್ರವೇಶ ನಿಯಮಾವಳಿಗಳ ಅಧಿಸೂಚನೆ ಸಂ. KU / Aca(S&T)/SSL-436 /UGCE /2023-24 / 14, dt. 25.05.2023.
2) KU / Aca(S&T)/SSL-441 /UGCE /2023-24 / 453, dt. 24.06.2023
3) ಸರ್ಕಾರಿ ಆದೇಶ ಸಂ. ಇಡಿ 162 ಯುಎನ್‌ಇ 2023, ಬೆಂಗಳೂರು, ದಿ. 13.09.2023.
4) ಮಾನ್ಯ ಕುಲಪತಿಗಳ ಆದೇಶ ದಿನಾಂಕ: 14-09-2023

------

ಮೇಲ್ಕಾಣಿಸಿದ ವಿಷಯ ಹಾಗೂ ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ಕ.ವಿ.ವಿ. ವ್ಯಾಪ್ತಿಯಲ್ಲಿ ಬರುವ ಎಲ್ಲ ಪದವಿ ಮಹಾವಿದ್ಯಾಲಯಗಳ ಪ್ರಾಚಾರ್ಯರ ಗಮನಕ್ಕೆ ತರಬಯಸುವುದೇನೆಂದರೆ, **ಅಗಸ್ಟ್ / ಸೆಪ್ಟೆಂಬರ್, 2023ರ ತಿಂಗಳನಲ್ಲಿ ಜರುಗಿದ ದ್ವಿತೀಯ ಪಿಯುಸಿ ಪೂರಕ–2 (PUC Supplementary Exam-2) ಪರೀಕ್ಷೆಗೆ ಹಾಜರಾಗಿ ಉತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ಸನ್ 2023–24ನೇ** ಸಾಲಿಗೆ ಪ್ರಥಮ ವರ್ಷದ ವಿವಿಧ ಸ್ನಾತಕ ಪದವಿ ಕೋರ್ಸುಗಳಿಗೆ (1ನೇ ಸೆಮಿಸ್ಟರಗೆ) ಆನ್‌ಲೈನ್ ಮುಖಾಂತರ UUCMS ನಲ್ಲಿ ನಿಗದಿಪಡಿಸಿದ ಶುಲ್ಕವನ್ನು ಭರಿಸಿ ಪ್ರವೇಶ ನೀಡಲು ಸೂಚಿಸಲಾಗಿದೆ.

ಕಾರಣ, ಸಂಬಂಧಿಸಿದ ಪದವಿ ಮಹಾವಿದ್ಯಾಲಯಗಳ ಎಲ್ಲ ಪ್ರಾಚಾರ್ಯರು ಇಂತಹ ವಿದ್ಯಾರ್ಥಿಗಳು ಪ್ರವೇಶ ಬಯಸಿದ ವಿವಿಧ ಪದವಿ ಕೋರ್ಸುಗಳಿಗೆ (ನಿಗದಿಪಡಿಸಿದ ವಿದ್ಯಾರ್ಥಿ ಪ್ರವೇಶ ಮಿತಿಯೊಳಗೆ) ನಿಗದಿತ ಶುಲ್ಕಗಳೊಂದಿಗೆ [ಉಲ್ಲೇಖ (1)ರ ಪ್ರವೇಶ ನಿಯಮಾವಳಿಗಳ ಪುಸ್ತಿಕೆಯಲ್ಲಿ ತಿಳಿಸಿದಂತೆ] UUCMS ಮುಖಾಂತರ ಶುಲ್ಕ ಪಾವತಿಸುವುದರೊಂದಿಗೆ, ವಿದ್ಯಾರ್ಥಿಗಳ ಪ್ರವೇಶ ಯಾದಿಯನ್ನು ಸಲ್ಲಿಸುವುದು.

**ಪ್ರವೇಶ ವೇಳಾಪಟ್ಟಿ**

| ಕ್ರ.ಸಂ. | ವಿವರ | ದಿನಾಂಕ |
|---|---|---|
| 1 | **ದ್ವಿತೀಯ ಪಿಯುಸಿ ಪೂರಕ–2 (PUC Supplementary Exam-2)** NEP ಅಡಿಯಲ್ಲಿ ಪದವಿ ತರಗತಿಗಳ 1ನೇ ಸೆಮಿಸ್ಟರ್ ಪ್ರವೇಶಕ್ಕೆ UUCMS ಮುಖಾಂತರ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಹಾಗೂ ಮಹಾವಿದ್ಯಾಲಯಗಳು ದಂಡ ರಹಿತ ಪ್ರವೇಶ ಪಡೆದುಕೊಳ್ಳುವ ಅವಧಿ | 13.09.2023 ರಿಂದ 22.09.2023 |
| 2 | **ದ್ವಿತೀಯ ಪಿಯುಸಿ ಪೂರಕ–2 (PUC Supplementary Exam-2)** NEP ಅಡಿಯಲ್ಲಿ ಪದವಿ ತರಗತಿಗಳ **1ನೇ** ಸೆಮಿಸ್ಟರ್ ತರಗತಿಗಳಿಗೆ ಹೆಚ್ಚುವರಿ ದಂಡ ರೂ. **4670/–** ರಂತೆ ಪ್ರವೇಶ ಪಡೆಯುವ ಅವಧಿ | 23.09.2023 ರಿಂದ 29.09.2023 |
| 3 | **ದ್ವಿತೀಯ ಪಿಯುಸಿ ಪೂರಕ–2 (PUC Supplementary Exam-2)** ಮತ್ತು ನಿಯಮಿತ ವಾರ್ಷಿಕ ಪರೀಕ್ಷೆಯಲ್ಲಿ ಉತ್ತೀರ್ಣಗೊಂಡು ದಂಡ ರಹಿತ ಮತ್ತು ಹೆಚ್ಚುವರಿ ದಂಡದೊಂದಿಗೆ ಪ್ರವೇಶ ಪಡೆದ ಎಲ್ಲ ವಿದ್ಯಾರ್ಥಿಗಳ ಪ್ರವೇಶ ಯಾದಿಯನ್ನು ಕ್ರಮ ಸಂಖ್ಯೆ 1 ರಿಂದ 2 ರಂತೆ ಶುಲ್ಕವನ್ನು ಭರಣಾ ಮಾಡಿದ ಚಲನ್ ಯಾದಿ ಹಾಗೂ ನಿಗದಿತ ಅವಶ್ಯಕ ಅನುಬಂಧ (3 ರಿಂದ 8) / ದಾಖಲೆಗಳೊಂದಿಗೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸುವ ಕೊನೆಯ ದಿನಾಂಕ | 03.10.2023 |

**ವಿಶೇಷ ಸೂಚನೆ:** ಈಗಾಗಲೇ ನಿಯಮಿತ ವಾರ್ಷಿಕ ಪರೀಕ್ಷೆಯಲ್ಲಿ ಉತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ದಿನಾಂಕ: 22.09.2023ರ ವರೆಗೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸುವುದು ಹಾಗೂ ದಿನಾಂಕ: 23.09.2023 ರಿಂದ 29.09.2023ರ ವರೆಗೆ ಈ ಹಿಂದಿನಂತೆ ಅನುಕ್ರಮ ಸಂಖ್ಯೆ 2ರ ಪ್ರಕಾರ ಎಲ್ಲ ವಿದ್ಯಾರ್ಥಿಗಳಿಗೆ ರೂ. 4,670/– ಗಳಂತೆ ವಿಶೇಷ ದಂಡವನ್ನು ಪಡೆದುಕೊಂಡು ಎಲ್ಲ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವುದು.

14/9/23

**ಕುಲಸಚಿವರು**

**ಗೆ,**

**ಪ್ರಾಚಾರ್ಯರು, ಕವಿವಿ ವ್ಯಾಪ್ತಿಯಲ್ಲಿ ಬರುವ ಎಲ್ಲ ಅಧೀನ ಮತ್ತು ಸಂಲಗ್ನ ಪದವಿ ಮಹಾವಿದ್ಯಾಲಯಗಳಿಗೆ ಮಿಂಚಂಚೆ ಮೂಲಕ ಕಳುಹಿಸಲಾಗಿದೆ. (ಕವಿವಿ ವೈಬ್‌ಸೈಟ್‌ನಲ್ಲಿ ಭಿತ್ತರಿಸಲಾಗಿದೆ)** (ಸಂಲಗ್ನ ಕಾನೂನು ಮಹಾವಿದ್ಯಾಲಯಗಳು / ಅಧೀನ & ಸಂಲಗ್ನ ಬಿ.ಎಡ್., ಮಹಾವಿದ್ಯಾಲಯಗಳನ್ನು ಹೊರತುಪಡಿಸಿ)

**ಪ್ರತಿಯನ್ನು ಮಾಹಿತಿಗಾಗಿ:**

1. ಕುಲಸಚಿವರು (ಮೌಲ್ಯಮಾಪನ) / ಕುಲಪತಿಗಳ ಆಪ್ತ ಕಾರ್ಯದರ್ಶಿ / ಕುಲಸಚಿವರ ಆಪ್ತ ಕಾರ್ಯದರ್ಶಿ, ಕವಿವಿ, ಧಾರವಾಡ.
2. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ ವಿಭಾಗ, (ಸಂಯೋಜನೆ) / ನಿರ್ದೇಶಕರು, ಉದ್ಯೋಗ ಮಾಹಿತಿ ಹಾಗೂ ತರಬೇತಿ ಕೇಂದ್ರ / ನಿರ್ದೇಶಕರು, ಸ್ಟುಡೆಂಟ್ಸ್ ವೆಲಫೇರ್ ವಿಭಾಗ / ನಿರ್ದೇಶಕರು, ಕ್ರೀಡಾ ವಿಭಾಗ / ನಿರ್ದೇಶಕರು, ಪ್ರಸಾರಾಂಗ ವಿಭಾಗ, ಕವಿವಿ, ಧಾರವಾಡ.
3. ನಿರ್ದೇಶಕರು, ಯು.ಯು.ಸಿ.ಎಂ.ಎಸ್. ಘಟಕ, ಕ.ವಿ.ವಿ. ಧಾರವಾಡ.
4. ನಿರ್ದೇಶಕರು, ಐಟಿ ಶಾಖೆ, ಪರೀಕ್ಷಾ ವಿಭಾಗ, ಕವಿವಿ, ಧಾರವಾಡ ಇವರಿಗೆ ಮಾಹಿತಿಗಾಗಿ. ಮುಂದುವರೆದು, ಸದರ ಸುತ್ತೋಲೆಯನ್ನು ಕವಿವಿ ವೆಬ್‌ಸೈಟ್‌ನಲ್ಲಿ ಅಳವಡಿಸಲು ಕೋರಲಾಗಿದೆ. **www.kud.ac.in** (Home Page/Notification).

**ಪ್ರತಿಯನ್ನು ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ:**

1. ಅಧೀಕ್ಷಕರು, ಪರೀಕ್ಷಾ (ಕಲಾ / ವಾಣಿಜ್ಯ / ವಿಜ್ಞಾನ / ಸಮಾಜ ವಿಜ್ಞಾನ / ಮ್ಯಾನೇಜಮೆಂಟ್) / ಪರೀಕ್ಷಾ (ಜಿಎಡಿ) / ಸಿಡಿಸಿ / ಸಂಯೋಜನೆ / ಪಿಜಿ / ಸಿಆರ್‌ಟಿ / ಪರೀಕ್ಷಾ (ಗೌಪ್ಯ) ವಿಭಾಗ / ಪರೀಕ್ಷಾ (ಪ್ರಶ್ನೆ ಪತ್ರಿಕೆ) ವಿಭಾಗ / ಸಿಬ್ಬಂದಿ ಆಡಳಿತ ಸುಧಾರಣಾ ವಿಭಾಗ, ಕ.ವಿ.ವಿ. ಧಾರವಾಡ.